REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 14 | ISSUE - 5 | FEBRUARY - 2025

# ಶಾಸನಗಳಲ್ಲಿ 'ಜೈನ' ದಾನ ಚಿಂತಾಮಣಿಯರು

ಡಾ. ಗೀತಾಂಜಲಿ ಎಂ. ಕುರುಡಗಿ
ಸಂಶೋಧಕ



ಪ್ರಾಚೀನ ಕರ್ನಾಟಕದಲ್ಲಿ 'ದಾನಗುಣ'ವೂ ಒಂದು ಮೌಲ್ಯವಾಗಿತ್ತು. ಇದಕ್ಕೆಲ್ಲ ಮುಖ್ಯ ಕಾರಣ ಧಾರ್ಮಿಕ ಹಿನ್ನಲೆಯ ಸಂಸ್ಕೃತಿ. ಪಾಪ-ಪುಣ್ಯ ಪ್ರಜ್ಞೆ, ದಾನ-ಧರ್ಮದ ಮೂಲಕ ತನಗೂ, ತನ್ನ ಪೂರ್ವಜರಿಗೂ, ತನ್ನ ವಂಶಸ್ಥರಿಗೂ ಪುಣ್ಯದ ಫಲ ದೊರೆಯುತ್ತದೆಯೆಂಬ ಬಲವಾದ ನಂಬಿಕೆ 'ದಾನ' ಮಾಡಲು ಪ್ರೇರಣೆ ಎನ್ನಬಹುದು. ಹಾಗೆಯೇ ಕೆಲವರ 'ಉದಾರ ಗುಣ' ಸಾಮಾಜಿಕ ಕಾಳಜಿಯೂ ಇದಕ್ಕೆ ಪ್ರೇರಣೆ ಎನ್ನಬಹುದು. ಮುಖ್ಯವಾಗಿ 'ದಾನ' ನೀಡಿದವರನ್ನು ಸಮಾಜದಲ್ಲಿ ಅತ್ಯಂತ ಗೌರವಯುತವಾಗಿ ಕಾಣಲಾಗುತ್ತಿತ್ತು.

ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರೂ ಧಾರ್ಮಿಕ ಚಟುವಟಿಕೆಗಳಲ್ಲಿ ಗಮನಾರ್ಹ ಪಾತ್ರವನ್ನೇ ವಹಿಸಿದ್ದಾರೆ. ಪ್ರಾಚೀನ ಕರ್ನಾಟಕದ ಸ್ತ್ರೀಯರಲ್ಲಿ ಜೈನಧರ್ಮದ ಅನುಯಾಯಿಗಳು ಹೆಚ್ಚು ಜಾಗೃತರಾಗಿದ್ದಂತೆ ಕಂಡು ಬರುತ್ತದೆ. ಜೈನ ಸಂಪ್ರದಾಯದಲ್ಲಿ ಮಹಿಳೆಗೆ ಸಾಕಷ್ಟು ಧಾರ್ಮಿಕ ಸ್ವಾತಂತ್ರ್ಯವಿದ್ದರೂ 'ಮೋಕ್ಷ'ವಿಲ್ಲ. ಈ ಸ್ವಾತಂತ್ರ್ಯದ ಅವಕಾಶ ಮತ್ತು ಮೋಕ್ಷ ಪಡೆದುಕೊಳ್ಳಬೇಕೆಂಬ ಹಂಬಲಗಳೇ ಅವಳ ಮನಸ್ಸು ಧಾರ್ಮಿಕವಾಗಿ ಎಳೆದಿರಬೇಕು. ಹಾಗಂತ ಹಿಂದೂ ಧರ್ಮದ ಸ್ತ್ರೀಯರು ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿಲ್ಲಂತ ಅಲ್ಲ. ಅವರ ಪ್ರಮಾಣವು ತುಂಬಾ ಇದೆ. ದಾನ-ಧರ್ಮದ ವಿಷಯದಲ್ಲಿ ಅರಸ-ಸೇವಕನೆನ್ನದೆ ದಾನ-ಧರ್ಮದ ಮಾಡಿದ ಉದಾಹರಣೆಗಳನ್ನು ಇತಿಹಾಸದಲ್ಲಿ ಗಮನಿಸಬಹುದು. ಇಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಜೈನ-ಜೈನೇತರ ದಾನ ಚಿಂತಾಮಣಿಯರನ್ನು ಎರಡು ವಿಭಾಗ ಕ್ರಮ ಮಾಡಿಕೊಳ್ಳಲಾಗಿದೆ.

*** ಜೈನ :**

ಮುಖ್ಯವಾಗಿ 'ದಾನಚಿಂತಾಮಣಿ'ರಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದವಳು 'ಅತ್ತಿಮಬ್ಬೆ'. ಇವಳ ಪರಿಚಯವನ್ನು ಕನ್ನಡಲೋಕಕ್ಕೆ ಮೊತ್ತ ಮೊದಲು ಮಾಡಿಕೊಟ್ಟವರು ಪ್ರೊ.ತಿ.ನಂ. ಶ್ರೀಕಂಠಯ್ಯನವರು. ಅವರ ಲೇಖನಕ್ಕೆ ಬಹುಮಟ್ಟಿಗೆ ಆಧಾರ ರನ್ನನ 'ಅಜಿತ ಪುರಾಣ' ಮತ್ತು ಲಕ್ಕುಂಡಿ ಶಾಸನಗಳು.

೧೦ನೇ ಶತಮಾನದ ಸಂದರ್ಭದಲ್ಲಿ ಧರ್ಮ ಪೋಷಕರಾಗಿ ಪ್ರಮುಖರಾಗಿ ಕಂಡು ಬರುವವರು ಅತ್ತಿಮಬ್ಬೆ. ಜಕ್ಕಣಬ್ಬೆ, ಬಚ್ಚಿಯಬ್ಬರಸ, ಪೋತಬ್ಬರಸ ಕಂಚಲಮಹಾದೇವಿ ಮುಂತಾದವರು.

**೧) ಅತ್ತಿಮಬ್ಬೆ :** ಅತ್ತಿಮಬ್ಬೆಯದು ಜೈನಸ್ತ್ರೀಯರಲ್ಲಿ ಅಷ್ಟೇ ಏಕೆ, ಕನ್ನಡ ನಾಡಿನ ಸ್ತ್ರೀ ಸಮೂಹದಲ್ಲಿ ಎದ್ದು ಕಾಣುವ ಹೆಸರು. ಚಾಳುಕ್ಯ ರಾಜ್ಯದಲ್ಲಿ ಹಿರಿಯ ಅಧಿಕಾರಿಯಾಗಿದದ ಮಲ್ಲಪಯ್ಯ ಇವಳ ತಂದೆ. ಅತ್ತಿಮಬ್ಬೆ ಹಾಗೂ ಇವಳ ತಂಗಿ ಗುಂಡಮಬ್ಬೆಯನ್ನು ಚಾಳುಕ್ಯರಲ್ಲಿ ಚಮಲಾಪತಿಯಾಗಿದ್ದ ನಾಗದೇವನಿಗೆ ಕೊಟ್ಟಿದ್ದರು. ಮದುವೆಯಾದ ಅಲ್ಪಕಾಲದಲ್ಲಿಯೇ ವೀರಸ್ವರ್ಗ ಪಡೆದ ಪತಿ ನಾಗದೇವನೊಂದಿಗೆ ಗುಂಡಮಬ್ಬೆ ಚಿತೆಯೇರಲು ಮಹಾಸತೀತ್ವವನ್ನು ತಂಗಿಯ ಪಾಲಿಗೆ ಬಿಟ್ಟುಕೊಟ್ಟ ಅತ್ತಿಮಬ್ಬೆ ಸನ್ಯಾಸ ಸ್ವೀಕರಿಸಿ ಪುತ್ರ ಅಣ್ಣಿಗನನ್ನು ಪಾಲಿಸುತ್ತ ಶ್ರಾವಕಿಯಾಗಿದ್ದು ಜೈನ ವ್ರತನಿಷ್ಠೆಯ ಬಾಳು ನಡೆಸಿದಳು.

ಕವಿ ರನ್ನನಿಗೆ ಆಶ್ರಯ ನೀಡಿ ಅವನಿಂದ 'ಅಜಿತ ಪುರಾಣ'ವನ್ನು ಬರೆಯಿಸಿದಲ್ಲದೆ ಹಿಂದೆ ತನ್ನ ತಂದೆ ಮತ್ತು ಚಿಕ್ಕಪ್ಪರು ಕವಿ ಪೊನ್ನನಿಂದ ಬರೆಯಿಸಿದ್ದ 'ಶಾಂತಿ ಪುರಾಣ'ದ ಸಾಇವರ ಪ್ರತಿಗಳನ್ನು ಮಾಡಿಸಿ ಶಾಸ್ತ್ರ ದಾನ ಕೈಗೊಂಡಳು. ಇದರ ಜೊತೆಗೆ ಧರ್ಮಶ್ರದ್ಧೆ ಎಷ್ಟಿತ್ತೆಂದರೆ ಮಣಿಕನಕ ಖಚಿತ ೧೫೦೦ ಜಿನ ಪ್ರತಿಮೆಗಳನ್ನು ದಾನ ಮಾಡಿದಳೆಂದು ಇದಕ್ಕೆ ಸಮಾನವಾಗಿ ಕೈಕೊಂಡ ೧೫೦೦ ಬಸದಿ ನಿರ್ಮಾಣ ಕಾರ್ಯ ಲಕ್ಕುಂಡಿಯಲ್ಲಿ ಬ್ರಹ್ಮಜಿನಾಲಯದ ನಿರ್ಮಾಣ ಹೀಗೆ ಧರ್ಮ ಮಾರ್ಗದಲ್ಲಿ ಮುನ್ನಡೆದ

ಅತ್ತಿಮಬ್ಬೆಯನ್ನು **'ಜೈರನ್ತ ಚೇಳಿನಿ'**, **'ಗುಣದಂಕಕಾರ್ತಿ'**, **'ಕಟಕ ಪವಿತ್ರೆ'**, **'ದಾನ ಚಿಂತಾಮಣಿ'**, **'ಕವಿ ವರಕಾಮಧೇನು'**, **'ಜಿನಧರ್ಮ ಪತಾಕಿ'** ಎಂಬ ಹಲವಾರು ವಿಶ್ಲೇಷಣೆಗಳಿಂದ ಲಕ್ಕುಂಡಿ ಶಾಸನ ಗೌರವಿಸಿದೆ.

ತನ್ನ ಜೀವಿತ ಕಾಲದಲ್ಲಿಯೇ ಅನೇಕ ಮಹಿಮೆಗಳನ್ನು ಮೆರೆದಳು ಅತ್ತಿಮಬ್ಬೆ. ಜಿನನ್ನು ಹೊತ್ತು ಬಂದ ಅತ್ತಿಮಬ್ಬೆಗೆ ಗೋದಾವರಿ ತನ್ನ ಪ್ರವಾಹವನ್ನು ನಿಲ್ಲಿಸಿತು. ಮದಿಸಿದ ಒಂದು ಆನೆ ಅವಳಿಗೆ ಶರಣಾಗಿ ಪಾದಕ್ಕೆರಗಿತು. ನದಿಯಲ್ಲಿ ಅಕಸ್ಮಾತ್ ಬಿದ್ದು ಹೋದ ಜಿನಬಿಂಬವು ಎಂಟು ದಿನಗಳಲ್ಲಿ ಕೈಗೆ ಬಂದಿತು. ಹೊತ್ತಿ ಉರಿಯುತ್ತಿದ್ದ ಅಗ್ನಿಯು ಇವಳ ಕೈಯ ಜಿನ ಗಂಧೋದಕ ಸಿಂಚನದಿಂದ ತಣ್ಣಗಾಯಿತು. ಶ್ರವಣಬೆಳಗೊಳದ ಗೊಮ್ಮಟವನ್ನು ಕಾಣಲು ನಿರಾಹಾರವಾಗಿ ಹೋದಾಗ ಆಯಾಸದ ಪರಿಹಾರಕ್ಕೆ ಅಕಾಲವೃಷ್ಟಿಯಾಯಿತು ಎಂದು ಲಕ್ಕುಂಡಿ ಶಾಸನದಲ್ಲಿ ಉದ್ಧೃತವಾಗಿದೆ. ಅತ್ತಿಮಬ್ಬೆಯ ಕಠೋರವಾದ ನಿಯಮವನ್ನನುಸರಿಸಿ ತಪ್ಪಸ್ಸಗೈದು ಜೈನಧರ್ಮದಲ್ಲಿ ಅತ್ಯಂತ ವಿಶ್ವಾಸವನ್ನಿಟ್ಟು ಅದರ ಏಳಿಗೆಗಾಗಿ ಪಟ್ಟ ಶ್ರಮ, ಮಾಡಿದ ತ್ಯಾಗ ಅನುಪಮವಾದುದು. ಹೀಗಾಗಿ ಅವಳು ತನ್ನ ಕಾಲದಲ್ಲಿಯೇ ಒಬ್ಬ ಅದ್ಭುತ ವ್ಯಕ್ತಿಯಾಗಿ ಪರಿಣಮಿಸಿದ್ದಲ್ಲದೆ ಮುಂದೆ ಇನ್ನೂರು ಮುನ್ನೂರು ವರ್ಷಗಳವರೆಗೆ ಕರ್ನಾಟಕದ ಜನಜೀವನದ ಮೇಲೆ ತುಂಬು ಪ್ರಭಾವವನ್ನು ಬೀರಿದಳು. ಅವಳ ದಾನ ಪ್ರವೃತ್ತಿ ಬಿರುದುಗಳು ಮುಂದಿನ ಜೈನಕುಲಕ್ಕೆ ಒಂದು ಮಾರ್ಗ ಕಲ್ಪಿಸಿತಲ್ಲದೆ ದಾನಧರ್ಮಗಳು ವಿಶೇಷವಾಗಿ ಬೆಳೆಯಲು ಪರೋಕ್ಷವಾಗಿಯೋ ಅಪರೋಕ್ಷವಾಗಿಯೋ ಸಹಾಯ ಮಾಡಿದವು.

ಧರ್ಮ–ದಾನ–ಶಿಲ್ಪ ಸಂವರ್ಧನೆ ಇಂತಹ ಕ್ಷೇತ್ರದಲ್ಲಿ ಇವಳನ್ನು ಮೀರಿಸುವ ಸ್ತ್ರೀ ಪ್ರಾಚೀನ ಕರ್ನಾಟಕದಲ್ಲಿ ಯಾರೂ ಹುಟ್ಟಲಿಲ್ಲ. ಆದರೆ ತಮ್ಮ ಪರಿಮಿತಿಯಲ್ಲಿ ಬಸದಿ ನಿರ್ಮಾಣದಂಥ ಧಾರ್ಮಿಕ ಕಾರ್ಯ ಮಾಡಿದ ಬೇರೆ ಸ್ತ್ರೀಯರು ಹೀಗೆ ಕಂಡು ಬರುತ್ತಾರೆ.

**೨) ಲಚ್ಚಿಯಬ್ಬರ**ಸಿ : ಕೊಂಡಿಯ ಅಂಕಪಾಲನ ಮಡದಿ ಲಚ್ಚಿಯಬ್ಬರಸಿ ಬೆಳುವಲ ನಾಡಿನ ಹೂಲಿಯಲ್ಲಿ ಬಸದಿಯೊಂದನ್ನು ನಿರ್ಮಿಸಿ ಅದರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಅಲ್ಲಿಯ ಋಷಿಗಳ ಆಹಾರ ದಾನಕ್ಕೆ ಪೂಲಿಯಾರೊಡೆಯ ಪ್ರಮುಖ ಸಾಸಿರ್ವರು ಮಹಾಜನಂಗಳ ಪಾದವನ್ನು ಆರಾಧಿಸಿ ಭೂಮಿಯನ್ನು ಪಡೆದು ಬಾಲಚಂದ್ರಭಟ್ಟಾರಕದೇವರ ಪಾದ ತೊಳೆದು ಬಿಟ್ಟಿರುವಳು.

೩) ಕ್ರಿ.ಶ. ೧೦೫೮ ರಲ್ಲಿ **ಕೊಂಗಾಳ್ವನಬ್ಬೆ ಪೋಚಬ್ಬರ**ಸಿಯೂ ಬಸದಿಯೊಂದನ್ನು ನಿರ್ಮಿಸಿ ಅದನ್ನು ಗುಣಸೇನ ಪಂಡಿತ ದೇವರಿಗೆ ಬಿಟ್ಟಿರುವಳು.

**೪) ಕುಂಕುಮಮಹಾದೇವಿ :** ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದುದು ಕುಂಕುಮಮಹಾದೇವಿ ಪುಲಿಗೆರೆಯಲ್ಲಿ ಕಟ್ಟಿಸಿದ **'ಆನೆಸಜ್ಜೆ'** ಬಸದಿ ೭ನೇ ಶತಮಾನದಲ್ಲಿ ನಿರ್ಮಿಸಿದ ಈ ಬಸದಿ ೧೦ ಮತ್ತು ೧೧ನೇ ಶತಮಾನದಲ್ಲಿ ಉಚ್ಚ ಮಟ್ಟದಲ್ಲಿ ಕೀರ್ತಿಯನ್ನು ಪಡೆದಿತ್ತು. ೧೦೭೨ ಹಾಗೂ ೧೦೭೮ರ ಎರಡು ಶಾಸನಗಳಲ್ಲಿ ನಂದಿದೇವ ಪಂಡಿತರು ಈ ಬಸದಿಯ ಆಚಾರ್ಯರಾಗಿ ಕಾರ್ಯ ನಿರ್ವಹಿಸಿದ ಇವರಿಗೆ ಅಷ್ಟೋಪವಾಸಿಕಂತಿ ಎಂಬ ಶಿಷ್ಯಳಿದ್ದ ವಿಷಯ ಕಂಡುಬರುತ್ತದೆ.

**೫) ಚಟ್ಟಲದೇವಿ :** ಶಾಂತರ ವಂಶದ ರಕ್ಕಸಗಂಗ ಪೆರ್ಮಾಡಿಯ ಮಡದಿ ಚಟ್ಟಲದೇವಿ **'ಧರ್ಮಂ ಪ್ರಾಗೇವ ಚಿನ್ತಯೇತ್'** ಎಂಬ ವ್ಯಾಕ್ಯಾರ್ಥದಂತೆ ಕೆರೆ, ಬಾವಿ ಮುಂತಾದ ಸಾರ್ವಜನಿಕ ಕಾರ್ಯಗಳೊಂದಿಗೆ ಪೊಂಬುಚ್ಚದಲ್ಲಿ ಬಸದಿ ನಿರ್ಮಿಸಲು ತಮ್ಮ ಗುರು ಶ್ರೇಯಾಂಸ ಪಂಡಿತರಿಂದ ಕೆಸರುಗಲ್ಲನಿಕ್ಕಿಸಿದಳೆಂದು ಹೂಂಚದ ಶಾಸನ ತಿಳಿಸುತ್ತದೆ.

**೬) ಚಾಕಲದೇವಿ :** ಚಾಲುಕ್ಯ ವಿಕ್ರಮಾದಿತ್ಯನ ರಾಣಿಯರಲ್ಲಿ ಒಬ್ಬಳಾದ ಚಾಕಲದೇವಿ 'ಬಸದಿ'ಯನ್ನು ಮಾಡಿಸಿ ದ್ರವಿಳಸಂಘದ ಮಲ್ಲಿಸೇನ ಭಟ್ಟಾರಕರ ಶಿಷ್ಯರೂ ತನ್ನ ಅನ್ವಯದ ಗುರುಗಳೂ ಆದ ಇಂದ್ರಸೇನ ಭಟ್ಟಾರಕರಿಗೆ ಬಿಟ್ಟುಕೊಟ್ಟಳು.

**೭) ಬಾಚಲದೇವಿ :** ಗಂಗಪೆರ್ಮಾಡಿಯ ಪಟ್ಟ ಮಹಾದೇವಿ ಬಾಚಲದೇವಿ ಬನ್ನಿಕೆರೆಯಲ್ಲಿ ಪಾರ್ಶ್ವನಾಥ ಸ್ವಾಮಿಗೆ ಜಿನಗೃಹವೊಂದನ್ನು ಮಾಡಿಸಿ ಅದಕ್ಕೆ ಬೂದಂಗೆರೆ ಬನ್ನಿಕೆರೆಯಲ್ಲಿ ತಳ ವೃತ್ತಿಯಾಗಿ ಮೂರು ಮತ್ತರ ಗದ್ದೆ, ಒಂದು ಮತ್ತರು ತೋಟ, ಎರಡು ಗಾಣಗಳನ್ನು ಬಿಟ್ಟುಕೊಟ್ಟರು ಎಂಬ ವಿಷಯ ಶಾಸನವೊಂದರಿಂದ ತಿಳಿದುಬರುತ್ತದೆ.

**೮) ಶಾಂತಲೆ :** ಹನ್ನೆರಡನೆಯ ಶತಮಾನದ ಪೂರ್ವದಲ್ಲಿ ಹೊಯ್ಸಳ ಸಾಮ್ರಾಜ್ಯವನ್ನು ಅಲಂಕರಿಸಿ ಕನ್ನಡ ಮಾಡನ್ನು ಬೆಳಗಿದ ವ್ಯಕ್ತಿಯೆಂದರೆ ವಿಷ್ಣುವರ್ಧನನ ಪಟ್ಟದ ರಾಣಿಯಾಗಿದ್ದ ಶಾಂತಲೆ. ಜೈನ ಇತಿಹಾಸದಲ್ಲಿ ಒಬ್ಬ ಅದ್ವಿತೀಯ ವ್ಯಕ್ತಿತ್ವದ ಮಹಿಳೆ. ಅತ್ತಿಮಬ್ಬೆಯನ್ನು ಬಿಟ್ಟರೆ ಹೇಳಬೇಕಾದ ದೊಡ್ಡ ಹೆಸರು ಇವಳದು. ಅತ್ತಿಮಬ್ಬೆಯ ಕಾರ್ಯಕ್ಷೇತ್ರ ಧಾರ್ಮಿಕವಾಗಿದ್ದರೆ, ಶಾಂತಲೆಯದು ರಾಜಕೀಯ–ಕಲೆ–ಧಾರ್ಮಿಕತೆಗಳ ಸಂಯುಕ್ತ ಕ್ಷೇತ್ರ. ಅವಳು ಬಲಿಪುರ ಅಥವಾ ಬಳ್ಳಿಗಾವೆಯಲ್ಲಿ ಹುಟ್ಟಿದವಳೆಂದು ಕಾಣುತ್ತದೆ. ತಂದೆ ಶಿವಭಕ್ತ ಮಾರಸಿಂಹಯ್ಯ ತಾಯಿ ಜಿನಭಕ್ತೆ ಮಾಚಿಕಬ್ಬೆ ಇವರ ಏಕಮಾತ್ರ ಪುತ್ರಿ ಶಾಂತಲೆ.

ಜೈನಧರ್ಮದ ಆರಾಧಕಿಯಾದ ಶಾಂತಲೆಯನ್ನು ಮುನಿಜನ ವಿನೇಯ ಜನ ವಿನೀತೆ, ಸಮ್ಯಕ್ತ್ವ ಚೂಡಾಮಣಿ, ಚತುಸ್ಸಮಯ ಸಮುದ್ಧರಣ ಕಾರಣಿ, ಜಿನಸಮಯ ಸಮುದಿತ ಪ್ರಾಕಾರೆ, ಜಿನಧರ್ಮ ನಿರ್ಮಳೆ, ಜಿನ ಧರ್ಮಕಥಾಕಥನ ಪ್ರಮೋದೆ, ಜಿನಗಂಧೋದಕ ಪವಿತ್ರಿ, ಕೃತೋತ್ತಮಾಂಗೆ ಮೊದಲಾದ ಬಿರುದುಗಳಿಂದ ಕರೆಯಲಾಗಿದೆ. ಈಕೆಯ ಜೈನಧರ್ಮ ನಿಷ್ಠೆಗೆ ಇವು ಸಾಕ್ಷಿಯೆನಿಸಿವೆ. ಈಕೆ ಬೆಳಗೊಳ ತೀರ್ಥದಲ್ಲಿ **'ಸವತಿಗಂಧವಾರಣ'** ಬಸದಿ ನಿರ್ಮಿಸಿ ಅಲ್ಲಿ ದೇವತಾಪೂಜೆ ಋಷಿಗಳ ಆಹಾರ ದಾನಕ್ಕೋಸ್ಕರ ಕಲ್ಕಣಿನಾಡ ಮೊಟ್ಟೆನವಿಲ ಗ್ರಾಮವನ್ನು ತನ್ನ ಗುರುಗಳಾದ ಪ್ರಭಾಚಂದ್ರ ಸಿದ್ಧಾಂತ ದೇವರಿಗೆ ಬಿಟ್ಟುಕೊಟ್ಟಿರುವಳು.

ಜೊತೆಗೆ ಆ ಬಸದಿಗೆ ವಿಷ್ಣುವರ್ಧನನ ಸಮ್ಮತಿಯಿಂದ ಗಂಗಸಮುದ್ರದ ಕೆಳಗಿನ ನಡುಬಯಲಿನಲ್ಲಿ ೫೦ ಕೊಳಗಗದ್ದೆ, ತೋಟವನ್ನು, ನಾಲ್ವತ್ತು ಗದ್ಯಾಣ ಹೊನ್ನನಿಕ್ಕೆ ಕಟ್ಟಿಸಿ ಚಿರುಗಿಂಗೆ ವಿಳಸನಕಟ್ಟಮುಮಂ' ಗುರು ಪ್ರಭಾಚಂದ್ರನಿಗೆ ಬಿಟ್ಟುಕೊಟ್ಟಿದ್ದಳು.

ವಿಷ್ಣುವರ್ಧನನು ಚೋಳರ ಮೇಲಿನ ವಿಜಯದ ಸ್ಮಾರಕವಾಗಿ ಕ್ರಿ.ಶ. ೧೧೧೭ ರಲ್ಲಿ ಚನ್ನಕೇಶವ ದೇವಾಲಯವನ್ನು ಕಟ್ಟಿಸಿದಾಗ ಅವಳೂ ಅದರ ಪಕ್ಕದಲ್ಲಿ ಕಪ್ಪೆಚೆನ್ನಿಗರಾಯ ದೇವಸ್ಥಾನವನ್ನು ಕಟ್ಟಿಸಿದಳು. ಶಾಂತಲೆ ಕ್ರಿ.ಶ. ೧೧೩೧ ರಲ್ಲಿ ಶಿವಗಂಗೆಯ ತೀರ್ಥದಲ್ಲಿ ಸನ್ಯಸನ ವಿಧಿಯಿಂದ ಮಡಿಯುತ್ತಾಳೆ. ಇಂತಹ ಮಹಾನ್ ವ್ಯಕ್ತಿತ್ವದ ಶಾಂತಲೆಯ್ನು "ಶಾಂತಲದೇವಿಯ ಗುಣಮಂ ಶಾಂತಲದೇವಿಯ ಸಮಸ್ತದಾನೋನ್ನತಿಯಂ ಶಾಂತಲದೇವಿಯಶೀಳಮಚಿಂತ್ಯಂ ಭುವನೈಕದಾನ ಚಿಂತಾಮಣಿಯುಂ" ಎಂದು ಇವಳನ್ನು ಶ್ರವಣಬೆಳಗೊಳ ಶಾಸನ ವರ್ಣಿಸಿದೆ.

ಹೀಗೆ ಇನ್ನೂ ಅನೇಕರಲ್ಲಿ ಪೋಚಿಕಬ್ಬೆ, ನಾಗಲದೇವಿ ಜಕ್ಕಿಯವ್ವೆರು ಜೈನಧರ್ಮದ ಉನ್ನತಿಗೆ ಚೈತ್ಯಾಲಯಗಳನ್ನು, ಜಿನವಿಗ್ರಹಗಳನ್ನು, ಬಸದಿಗಳನ್ನು, ಹಣವನ್ನು ದಾನದ ಮೂಲಕ ತಮ್ಮ ದಾನಗುಣವನ್ನು ಮೆರೆದಿದ್ದಾರೆ.

**೯) ಪೋಚಿಕಬ್ಬೆ :** ಹೊಯ್ಸಳ ವಿಷ್ಣುವರ್ಧನನ ದಂಡನಾಯಕನೂ ವಿಚಿರಾಜನ ಮಗನೂ ಆದ ಗಂಗರಾಜ ಈತನ ತಾಯಿ ಪೋಚಲದೇವಿ ಅಥವಾ ಪೋಚಿಕಬ್ಬೆ, ಮಡದಿಯರು ಲಕ್ಷ್ಮೀಮತಿ ದಂಡನಾಯಂತಿ ಮತ್ತು ನಾಗಲದೇವಿಯರು ಜೈನಧರ್ಮಕ್ಕೆ ಅದ್ವಿತೀಯ ಸೇವೆ ಸಲ್ಲಿಸಿರುವರು. ಪೋಚಿಕಬ್ಬೆ ಬೆಳಗೊಳದ ತೀರ್ಥ, ಅಲ್ಲದೆ ಇನ್ನೂ ಅನೇಕ ತೀರ್ಥಗಳನ್ನು ಹಲವು ಚೈತ್ಯಾಲಯಗಳನ್ನು ಮಾಡಿಸಿ ಮಹಾದಾನ ಮಾಡಿದರೆ, ಸೊಸೆ ಲಕ್ಷ್ಮೀಮತಿ ಶ್ರವಣಬೆಳಗೊಳದಲ್ಲಿ ಲಕ್ಷ್ಮೀಮತಿ ಬಸದಿಯೊಂದನ್ನು ನಿರ್ಮಾಣ ಮಾಡಿದ್ದು ಅದು ಈಗ 'ಎರಡು ಕಟ್ಟೆ ಬಸದಿ' ಎಂದು ಹೆಸರು ಪಡೆದಿದೆ. ಅಲ್ಲದೆ ಪತಿ ಗಂಗಣ ಮತ್ತು ಗುರು ಪ್ರಭಾಚಂದ್ರರೊಂದಿಗೆ ಮೇಘಚಂದ್ರರ ನಿಷಧಿ ನಿಲ್ಲಿಸಿದುದನ್ನು ಅಲ್ಲಿನ ಶ್ರವಣಬೆಳಗೊಳದ ಶಾಸನವೊಂದು ತಿಳಿಸಿದೆ. ತಂಗಿ ದೇಮತಿಗೆ ಜಯ ಸ್ತಂಭವೆಂಬಂತೆ ಒಂದು ಶಿಲಾಸ್ತಂಭವನ್ನು, ಸಹೋದರ ಬೂಚಣಿಗೆ ನಿಷಧಿಯನ್ನು ನಿಲ್ಲಿಸಿರುವಳು. ತನ್ನ ದಾನಧರ್ಮ ಕ್ರಿಯೆಗಳಿಂದ ಸೀತಾ–ಭೂದೇವಿ ಸರಸ್ವತಿ ಚೋಳಿನಿಯರಿಗೆ ಸಮಾನವೆನಿಸಿದ್ದ ಈಕೆ ಪತಿ ಗಂಗರಾಜನಿಗೆ 'ಕಾರ್ಯೆ ನೀತಿವಧೂ ರಣೇ ಜಯವಧೂ' ಎಂದು ಪ್ರಸಿದ್ಧಳಾಗಿದ್ದಳು ಎಂಬುದನ್ನು ಶ್ರವಣಬೆಳಗೊಳ (ಕ್ರಿ.ಶ. ೧೨೦೦) ಶಾಸನವೊಂದರಲ್ಲಿ ಉಲ್ಲೇಖವಿದೆ.

**೧೦) ಹರಿಯಬ್ಬರಸಿ:** ಹೊಯ್ಸಳ ವಿಷ್ಣುವರ್ಧನನ ಮಗಳು ಹರಿಯಬ್ಬರಸಿ 'ಚತುರ್ವಿಧದಾನ' ದಲ್ಲಿ ಅದ್ವಿತೀಯರೆನಿಸದಂತವಳು. "ಧರೆಯೊಳನನ್ತ ದಿವ್ಯಯತಿಸನ್ತತಿಗನ್ನಮನಾದ ಭೀತಿಯಂ ಬರೆಪಲರಂಜದಿರೆಂಬಭಯ ವಾಕ್ಯಮನಾತುರರಾಗಿಬೇರ್ಪ್ಪವರ್ಗಿರದೆ ಶರೀರಕ್ಷಣಮಂ" ಕೈಗೊಂಡ ಕಾರ್ಯವೊಂದು ಹಂತೂರಿನ ಶಾಸನದಲ್ಲಿ ಪ್ರಕಟವಾಗಿದೆ.

ಜೈನಧರ್ಮದ ಕೀರ್ತಿಯನ್ನು ಬೆಳಗಿದ ಹಲವಾರು ಸ್ತ್ರೀಯರು ಕಂತಿ ಅಥವಾ ಸನ್ಯಾಸಿನಿಯರಾಗಿ ಇಲ್ಲವೆ ಶ್ರಾವಕಿಯರಾಗಿ ಭೋಗದಲ್ಲಿದ್ದೂ ಧರ್ಮಕಾರ್ಯ ಪ್ರವೃತ್ತರಾದಂತವರು ಇದ್ದರು. ಪ್ರಭು ಪರಿವಾರದಿಂದ ಮೊದಲುಗೊಂಡು ಪ್ರಜಾಪರಿವಾರದ ವರೆಗಿನ ಎಂತ ಹಂತಗಳ ಗೃಹಿಣಿಯರು ಈ ವರ್ಗದಲ್ಲಿ ಸಮಾವೇಶಗೊಂಡಿದ್ದರು. ಆದರೆ ಧರ್ಮಾಚರಣೆಯಲ್ಲಿ ಪ್ರಭು ಮತ್ತು ಉನ್ನತವರ್ಗದ ಮಹಿಳೆ ಬಸದಿ ನಿರ್ಮಾಣ, ಅದರ ಆಡಳಿತ ವ್ಯವಸ್ಥೆಯಂತಹ ಬಹಳ ವೆಚ್ಚದ ಕಾರ್ಯವನ್ನು ನಿರ್ವಹಿಸಿದರೆ, ಸಾಮಾನ್ಯ ವರ್ಗದ ಮಹಿಳೆಯರು ಜೀರ್ಣೋದ್ಧಾರ ಧೂಪ, ದೀಪ, ವಿಗ್ರಹದಾನದಂತಹ ಕಾರ್ಯವನ್ನು ಕೈಗೊಂಡಿರುವರು. ಆದರೆ ಬಹಳಷ್ಟು ಸಂದರ್ಭದಲ್ಲಿ ದೊಡ್ಡವರ ದೊಡ್ಡ ಮೊತ್ತದ ದಾನದ ಮಾಹಿತಿ ಶಾಸನಗಳಲ್ಲಿ ಉಲ್ಲೇಖಿಸುವಂತದ್ದು ಸಾಮಾನ್ಯ ದಾನಗಳು ನಿರ್ಲಕ್ಷಿಸಿ ದಾಖಲಾಗದೆ ಉಳಿದಿರುವುದನ್ನು ಅಲಕ್ಷಿಸುವಂತಿಲ್ಲ. ಏನೇ ಇರಲಿ ಜೈನಧರ್ಮದಲ್ಲಿ ದಾನಧರ್ಮಗಳ ಮೂಲಕ ಬಸದಿ, ಚೈತ್ಯಾಲಯಗಳ ನಿರ್ಮಾಣದಿಂದ ಶಾಸ್ತ್ರದಾನಗಳ ಮೂಲಕ ಅರಿವಿಲ್ಲದೆ ಕನ್ನಡ ಸಾಹಿತ್ಯಕ್ಕೆ ಹಾಗೂ ಕರ್ನಾಟಕ ಸಂಸ್ಕೃತಿಗೆ ನೀಡಿರುವ ಅಮೂಲ್ಯವಾದ ಕೊಡುಗೆಗಳಾಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

## ಪರಾಮರ್ಶನ ಗ್ರಂಥಗಳು

೧. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ– ಚೆನ್ನಕ್ಕ ಪಾವಟೆ.

೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ. ಎಲ್. ತಿಪ್ಪೇರುದ್ರಸ್ವಾಮಿ, ಪ್ರ: ಡಿ.ವಿ.ಕೆ. ಮೂರ್ತಿ, ಮೈಸೂರು.